**ಅಸಲ ದಾವಾ ನಂ.212/2022**

**<u>ಪಿಡಬ್ಲ್ಯೂ:03</u>**

**<u>ದಿನಾಂಕ: 27.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಿಂದ</u>**

1. ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಯರ ಪರಿಚಯ ಇರುತ್ತದೆ. ವಾದಿ ನಂ.1 ಮತ್ತು 2 ಮತ್ತು ಪ್ರತಿವಾದಿ ನಂ.1 ರಿಂದ 3 ಭೀಮುನ ಮಕ್ಕಳು ಎಂದರೆ ಸರಿ. ದಾವಾಸ್ತಿಗಳು ಭೀಮುನ ಪಿತ್ರಾರ್ಜಿ ಆಸ್ತಿಗಳು ಎಂದರೆ ಸರಿ. ವಾದಿ ನಂ.1 ಮತ್ತು 2 ಪ್ರತಿವಾದಿ ನಂ. 1 ಮತ್ತು 3 ರವರಿಗೆ ದಾವಾಸ್ತಿಯಲ್ಲಿ ಸಮನಾದ ಭಾಗ ಇರುತ್ತದೆ ಎಂದರೆ ಸರಿ.

**<u>3 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.

ಅಸಲ ದಾವಾ ನಂ.212/2022

ಪಿಡಬ್ಲ್ಯೂ:02

**ದಿನಾಂಕ: 27.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಿಂದ**

1. ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಯರ ಪರಿಚಯ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರು ಮೃತ ಭೀಮುನ ವಾರಸುದಾರರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ನಡುವೆ ಇಲ್ಲಿಯವರೆಗೂ ಪಾಲು ವಾಟ್ನಿಯಾಗಿಲ್ಲ ಎಂದರೆ ಸರಿ. ವಾದಿ ನಂ.1 ಮತ್ತು 2 ಪ್ರತಿವಾದಿ ನಂ. 1 ಮತ್ತು 3 ರವರಿಗೆ ದಾವಾಸ್ತಿಯಲ್ಲಿ ಸಮನಾದ ಭಾಗ ಇರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 3 ನೇ ಪ್ರತಿವಾದಿ ಪರ ವಕೀಲರಿಂದ**

2. ನನ್ನ ಹೆಸರು ಮಂಗೇಶ ತಂ.ಶೇವು ರಾಠೋಡ. ನಾನು ಹೆಗಡಿಹಾಳ ತಾಂಡಾದಲ್ಲಿ ವಾಸವಾಗಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ಪರಿಚಯ ಇರುತ್ತದೆ. ಭೀಮು ವಾದಿ ನಂ.1 ರಿಂದ 3 ಮತ್ತು 5 ಮತ್ತು ಪ್ರತಿವಾದಿ ನಂ.1 ರಿಂದ 3 ರವರಿಗೆ ತಂದೆಯಾಗಬೇಕು. ಭೀಮು ಲಮಾಣಿ ನನಗೆ ಚಿಕ್ಕಪ್ಪನಾಗಬೆಕು. ಚಿಕ್ಕಪ್ಪ ಎಂದರೆ ನನ್ನ ತಂದೆಯ ತಮ್ಮ. ದಾವಾಸ್ತಿಗಳು ನನಗೆ ಸಂಭಂದ ಇಲ್ಲ ಎಂದರೆ ಸರಿ. ಭೀಮು ಮುಂಚೆ ರೇಲ್ವೆ ಪೋಲಿಸ ಅಂತಾ ಕರ್ತವ್ಯನಿರ್ವಹಿಸುತ್ತಿದ್ದರು. ಭೀಮು ರವರು ತನ್ನ ಸೇವಾಧಿಯಲ್ಲಿ ಹುಬ್ಬಳ್ಳಿ, ಬಳ್ಳಾರಿ ಮತ್ತು ಗದಗನಲ್ಲಿ ಸೇವೆ ಸಲ್ಲಿಸಿದ್ದರು. ಸದರಿ ಭೀಮು ಯಾವ ವರ್ಷ ನಿವೃತ್ತಿಯಾಗಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ಅವರು ನಿವೃತ್ತಿ ನಂತರ ವಿಜಯಪುರದಲ್ಲಿ ವಾಸವಾಗಿದ್ದು ಹೆಗಡಿಹಾಳ ತಾಂಡಾಕ್ಕೆ ಹೋಗಿ ಬಂದು ಮಾಡುತ್ತಿದ್ದರು. ಭೀಮುನ ಹೆಂಡತಿ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ಗಂಗಾಬಾಯಿ ತೀರಿಕೊಂಡ ಸಮಯದಲ್ಲಿ ಸುಮಾರು 6 ತಿಂಗಳು ಕಾಲ ಭೀಮು ಹೆಗಡಿಹಾಳ ತಾಂಡಾ ಬಂದು ವಾಸವಾಗಿದ್ದರು ಎಂದರೆ ಸಾಕ್ಷಿಯು ಗಂಗಾಬಾಯಿ ತೀರಿಕೊಳ್ಳುವ ಮುಂಚೆ ಸಹ ಅಲ್ಲಿಯೇ ಇದ್ದರು ಅಂತಾ ನುಡಿಯುತ್ತಾರೆ. ಭೀಮುನ ಮಕ್ಕಳ ಶೈಕ್ಷಣಿಕ ಖರ್ಚು ವೆಚ್ಚ ಭೀಮುನೇ ನೋಡಿಕೊಂಡಿದ್ದರು ಎಂದರೆ ಸರಿ. ಅವರ ಮನೆತನದ ಎಲ್ಲ ನಿರ್ದಾರಗಳನ್ನು ಭೀಮುನೆ ಮಾಡುತ್ತಿದ್ದರು ಎಂದರೆ ಸರಿ. ಭೀಮು ಅವರಿಗೆ ನಿವೃತ್ತಿ ನಂತರ ಕಡಿಮೆ ಮೊತ್ತದ ಪಿಂಚಣಿ ಬರುತ್ತಿತ್ತು ಎಂದರೆ ಸರಿ.ಸದರಿ ಭೀಮು ತನ್ನ ಮಗ ನಾಗೇಶ ತನ್ನ ಎಲ್ಲ ಮಕ್ಕಳಿಗೆ ಶೈಕ್ಷಣಿಕ ಖರ್ಚು ಮಾಡಿದ್ದರು ಎಂದರೆ ಸರಿ.ಭೀಮನ ಮಕ್ಕಳ

ಶೈಕ್ಷಣ ಖರ್ಚು ಬರುತ್ತಿತ್ತು ಎಂದರೆ ಸರಿ. ನಾಗೇಶ ಮತ್ತು ಶೀಲಾ ಮದುವೆಯನ್ನು ತನ್ನ ಸ್ವಂತ ಖರ್ಚಿನಿಂದ ಭೀಮು ಮಾಡಿದ್ದರು ಎಂದರೆ ಸರಿ. ಭೀಮು ತನ್ನ ಮಕ್ಕಳ ಶೈಕ್ಷಣಿಕ ಖರ್ಚಿಗಾಗಿ ಮತ್ತು ಆರೋಗ್ಯದ ಖರ್ಚು ಸೇರಿ ಸಾಲ ಆಗಿತ್ತು ಎಂದರೆ ಸರಿಯಲ್ಲ. ಅವರಿಗೆ ಮೇಲೆ ಹೇಳಿದ ಖರ್ಚು ಗಳಿಂದ ಸಾಲವಾಗಿದ್ದರಿಂದ ದಿ:25-03-2015 ರಂದು ದಾವಾಸ್ತಿ ಸರ್ವೆ ನಂ.269/1 ನ್ನು 3 ನೇ ಪ್ರತಿವಾದಿಗೆ ನೊಂದಾಯಿತಿ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಭೀಮು ತನ್ನ ಮನೆತನದ ಎಲ್ಲಾ ಖರ್ಚು ಮತ್ತು ವೆಚ್ಚಗಳನ್ನು ತಾನೇ ನೋಡಿಕೊಳ್ಳುತ್ತಿದ್ದನು ಬೇರ ಅವರಿಗೆ ನೀಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಭೀಮು ತೀರಿಕೊಳ್ಳುವರೆಗೂ ಆರೋಗ್ಯವಾಗಿದ್ದರು ಎಂದರೆ ಸರಿ. ಸದರಿ ಭೀಮು ವಯಸ್ಸದಾ ಕಾರಣ ತೀರಿಕೊಂಡಿರುತ್ತಾರೆ ಎಂದರೆ ಸರಿ.

3) ನನ್ನ ಮುಖ್ಯ ವಿಚಾರಣೆಯನ್ನು ವಕೀಲರು ಬರೆದಿರುತ್ತಾರೆ. ಈ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ವಾದಿ ನಂ.1,2 ಮತ್ತು 1 ಪ್ರತಿವಾದಿ ತಿಳಿಸಿದ್ದರು. ನನ್ನ ಮುಖ್ಯವಿಚಾರಣೆಯನ್ನು ಆಂಗ್ಲ ಬಾಷೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನನಗೆ ಇಂಗ್ಲಿಷ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿರುತ್ತಾರೆ ಅಂತಾ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಓದಿ ಕೇಳಿ ತಿಳಿದುಕೊಂಡಿರುತ್ತೇನೆ ಅಂತಾ ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ 7 ನೇ ಪ್ಯಾರ ಏನು ಬರೆದಿದ್ದರು ಅಂತಾ ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದು ಇಂಗ್ಲೀಷನಲ್ಲಿ ಇದ್ದು ಓದಿ ಹೇಳಿದರೆ ಉತ್ತರ ನೀಡ ಬಲ್ಲೆ ಅಂತಾ ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ 7 ನೇ ಪ್ಯಾರದಲ್ಲಿ ಹೇಳಿದ ವಿಷಯ ಖೊಟ್ಟಿಯಾಗಿ ಹೇಳಿ ಬರೆಸಿರುತ್ತೆನೆ ಎಂದರೆ ಸರಿಯಲ್ಲ. ಭೀಮು ಮತ್ತು 3 ನೇ ಪ್ರತಿವಾದಿಯಾದ ವ್ಯವಹಾರ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ 10 ನೇ ಪ್ಯಾರದಲ್ಲಿ ಖೊಟ್ಟಿ ವಿಷಯ ಹೇಳಿ ಬರೆಸಿರುತ್ತೆನೆ ಎಂದರೆ ಸರಿಯಲ್ಲ.

4) ವಾದಿಗಳು ಮತ್ತು ಪ್ರತಿವಾದಿ ನಂ.1,2,3 ಮತ್ತು ಅವರ ತಂದೆ ನಡುವೆ ಆದ ವ್ಯವಹಾರ ಕುರಿತು ನನಗೆ ತಿಳಿಸಿರುವುದಿಲ್ಲ ಹಾಗಾಗಿ ಅವರ ಮನೆತನದ ವಿಷಯ ನನಗೆ ಮಾಹಿತಿ ಇಲ್ಲ ದಿದ್ದರೂ ಸಹ ಖೊಟ್ಟಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಪರಸ್ಪರ ಸಂಭಂದ ಸರಿ ಇಲ್ಲ ಎಂದರೆ ಸರಿ. ಹಾಗಾಗಿ ವಾದಿ ನಂ.1 ಮತ್ತು 2 ನನ್ನನ್ನು ಪುಸಲಾಯಿಸಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ

ಸರಿಯಲ್ಲ. 3 ನೇ ಪ್ರತಿವಾದಿ ದಿ:25-03-2014 ರಂದು ಭೀಮುನಿಂದ ಖರೀದಿ ಪತ್ರವನ್ನು ಬರೆದುಕೊಂಡಿದು ಗೊತ್ತಿದ್ದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2014 ನೇ ಸಾಲಿನಿಂದ ದಾವಾಸ್ತಿ ಅನು.ಕ್ರಮ.ನಂ.3 ನ್ನು 3 ನೇ ಪ್ರತಿವಾದಿ ಕಬ್ಜಾವಹಿವಾಟಿಯಲ್ಲಿ ಇದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ವಾದಿಯರು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದರೂ ಸಹ ವಾದಿಯರಿಗೆ ಅನುಕೂಲವಾಗಲಿ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಖರೀದಿಸಿದ ನಂತರ ಮನಗೂಳಿಯ ಕೇನರಾ ಬ್ಯಾಂಕನಲ್ಲಿ ಸಾಲ ಪಡೆದು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೂ ಮತ್ತು 3 ನೇ ಪ್ರತಿವಾದಿ ಬಿನ್ನಾಭಿಪ್ರಾಯ ಇರುತ್ತದೆ ಎಂದರೆ ಸರಿಯಲ್ಲ. ನನಗೂ ಮತ್ತು 3 ನೇ ಪ್ರತಿವಾದಿಗೆ ಪರಸ್ಪರ ಸಂಭಂದ ಸರಿಯಿಲ್ಲದ ಕಾರಣ ಅವಳ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಖೊಟ್ಟಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.